**Sri C. J. MUCKANNAPPA.**—The adjournment motion given is quite different from what the Minister intends to say.

**Mr. SPEAKER.**—I have not seen it and I have not allowed or disallowed it. I learn the Minister is making a statement which is the appropriate method.

---

## BUDGET FOR 1962-63—VOTING DEMANDS FOR GRANDS.

DEMAND Nos. 25, 2, 42 AND 33.

*Debate continued.*

**Mr. SPEAKER.**—Now, the Hon'ble Minister for Revenue will reply to the debate.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ನಿನ್ನೆಯದಿವಸ ರೆವೆನ್ಯೂ ಖಾತೆಯ ಬೇಡಿಕೆ ವಿಷಯದಲ್ಲಿ ಮಾನ್ಯ ಸದಸ್ಯರು ಮಾತನಾಡುತ್ತಾ ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀಯುತರುಗಳಾದ ಕೇಶವಮೂರ್ತಿ, ಎಂ. ಆರ್. ಪಾಟೀಲ್, ದೇವೇಗೌಡ, ಜೆ. ನಾರಾಯಣಪ್ಪ, ಕದಂ, ದೊಡ್ಡಮೇಟಿ, ಬಸಪ್ಪ, ಬೈರೇಗೌಡ, ರಾಮೇಗೌಡ, ಬಿ. ಎಲ್. ಗೌಡ ಮುಂತಾದ ಸುಮಾರು ಹತ್ತು ಜನ ಸದಸ್ಯರು ನಮ್ಮ ಇಲಾಖೆಗೆ ಸಂಬಂಧಪಟ್ಟ ಬೇಡಿಕೆ ವಿಷಯವಾಗಿ ಮಾತನಾಡಿ ಕಲವು ವಿಚಾರಗಳನ್ನು ಹೇಳಿದ್ದಾರೆ. ಅವರು ಕೊಟ್ಟ ಬಹಳ ಪ್ರಾಮುಖ್ಯವಾದ ಸಲಹೆಗಳಲ್ಲಿ ಮೊದಲನೆಯದು ಲ್ಯಾಂಡ್ ಅಕ್ವಿಜಿಷ್ಷನ್ ಸಿಸ್ಟಂಗೆ ಸಂಬಂಧಪಟ್ಟಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಕೆಲವು ಸದಸ್ಯರು ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈಗಿರುವ ಲ್ಯಾಂಡ್ ಅಕ್ವಿಜಿಷ್ಷನ್ ಪದ್ಧತಿ ಸರ್ಕಾರಕ್ಕೆ ಅಷ್ಟು ತೃಪ್ತಿಕರವಾಗಿ ಕಾಣುತ್ತಿಲ್ಲ. ಈ ವಿಷಯದಲ್ಲಿ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಇದೇ ಸಭೆಯಲ್ಲಿ ಸರ್ಕಾರದ ಅಭಿಪ್ರಾಯವನ್ನು ಹೇಳಿದ್ದೇನೆ. ಈಗ ಅಕ್ವಿಜಿಷ್ಷನ್ ಸಾಮಾನ್ಯವಾಗಿ ನಿಧಾನವಾಗುತ್ತಿದೆ. ಇದರಿಂದ ಬಹಳ ಜನರಿಗೆ ತೊಂದರೆ. ಇದನ್ನು ತಪ್ಪಿಸಲು ಏನುಮಾಡಬೇಕೆಂಬುದನ್ನು ವಿಮರ್ಶೆಮಾಡಿ ಸಾಧ್ಯವಾದಷ್ಟು ತೀವ್ರವಾಗಿ, ವೇಗವಾಗಿ ಅಕ್ವಿಜಿಷ್ಷ್ ಆಗಲು ಸಂಬಂಧಪಟ್ಟ ಇಲಾಖಾ ಧಿಕಾರಿ ಮತ್ತು ಅನುಭವಸ್ಥರಾದ ಕೆಲವು ಮಾನ್ಯ ಸದಸ್ಯರನ್ನೊಳಗೊಂಡ ಒಂದು ಸಭೆಯನ್ನು ಕರೆದು ಸಲಹೆ ಪಡೆಯಬೇಕೆಂದಿದ್ದೇವೆ. ಶ್ರೀ ಎಂ. ಆರ್. ಪಾಟೀಲರು ಬಹಳ ಅನುಭವದಿಂದ ಒಳ್ಳೆಯ ಕೆಲವು ಸಲಹೆಗಳನ್ನು ಕೊಟ್ಟರು. ಅವರು ಕೊಟ್ಟಿರುವ ಸಲಹೆಗಳು ಬಹಳ ಉಪಯುಕ್ತವಾಗಿವೆ. ಈ ಎಲ್ಲ ಸಲಹೆಗಳನ್ನೂ ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಈಗ ಹಳ್ಳಿಗಳಲ್ಲಿ ಕೆಲವು ವರ್ಷಗಳಿಂದ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಅಲ್ಲದೆ ಗ್ರಾಮದ ಸುತ್ತುಮುತ್ತ ಬಹಳ ಫಲವತ್ತಾದ ಜಮೀನಿದೆ. ಇದೊಂದು ದೊಡ್ಡ ಕಾರಣ ನಿಧಾನವಾಗುವುದಕ್ಕೆ. ಎರಡನೆಯದು ಗ್ರಾಮಗಳಲ್ಲಿ ವ್ಯಾಜ್ಯ, ಪಾರ್ಟಿ ಇರುವುದು. ಈ ಕೆಲವು ಕಾರಣಗಳಿಂದ ತೀವ್ರತೆಯಿಂದ ಅಕ್ವೈರ್ ಮಾಡುವುದಕ್ಕೆ ಆಸ್ಪದವಿಲ್ಲದೆ ಸ್ವಲ್ಪ ನಿಧಾನವಾಗುತ್ತಿದೆ. ಗ್ರಾಮಗಳಲ್ಲಿ ಈಗ ಜನಸಂಖ್ಯೆ ಹೆಚ್ಚಿರುವುದರಿಂದ ವಾಸಕ್ಕೆ ಸ್ಥಳ ಸಾಲದೆ ಜನರಿಗೆ ಬಹಳ ತೊಂದರೆಯಾಗಿದೆ. ಅಕ್ವಿಜಿಷ್ಷ್ ಅಕ್ವಿನಲ್ಲಿರುವ ಎಮರ್ಜೆನ್ಸಿ ಲೆಜಿಸ್ಲೇಷ್ಷನ್‌ಗೆ ಸಂಬಂಧಿಸಿದ ೧೭ನೆಯ ಸೆಕ್ಷನ್ ಪದೇ ಪದೇ ಉಪಯೋಗಿಸಬಾರದೆಂದು ಹೈಕೋರ್ಟ್ ತಿಳಿಸಿದೆ. ಆದರೆ ಈಗ ಎಮರ್ಜೆನ್ಸಿಯಿದೆಯೆಂದು ಕಾಣುತ್ತದೆ. ಹಳ್ಳಿ ಕುಟುಂಬಗಳಲ್ಲಿ ಸ್ಥಳವಿಲ್ಲದೆ, ನೂರಾರು ಜನ ಬಡರೈತರು ಅನಾರೋಗ್ಯದಿಂದ ನರಳುತ್ತಿದ್ದಾರೆ; ಮನೆ ಕಟ್ಟಿಕೊಳ್ಳಲು ಸ್ಥಳವಿಲ್ಲ, ದನಕರುಗಳನ್ನು ಕಟ್ಟುವುದಕ್ಕೆ ಸ್ಥಳವಿಲ್ಲದೆ ಬೇರೆಯವರ ನಿವೇಶನಗಳಲ್ಲಿ ಅವನ್ನು ಕಟ್ಟುತ್ತಾ ಅನನುಕೂಲಕ್ಕೆ ಗುರಿಯಾಗಿರುತ್ತಾರೆ. ಆದ್ದರಿಂದ ಲ್ಯಾಂಡ್ ಅಕ್ವಿಸಿಷ್ಷ್ ಕೇಸುಗಳನ್ನು ಸಾಧ್ಯವಾದಷ್ಟು ಬೇಗನೆ ಇತ್ಯರ್ಥಮಾಡುವ ದೃಷ್ಟಿಯಿಂದ ಈಗಿರುವ ಪದ್ಧತಿಯನ್ನು ಬದಲಾಯಿಸುವುದನ್ನು ಯೋಚನೆ ಮಾಡುತ್ತಿದ್ದೇವೆ.

ಎರಡನೆಯದಾಗಿ ಭೂ-ಹಂಚಿಕೆಯ ವಿಷಯ. ದರಖಾಸ್ತು ವಿಲೇವಾರಿಯ ವಿಷಯದಲ್ಲಿ ಮಾನ್ಯ ಸದಸ್ಯರಿಗೆ ಅನುಭವವಿದೆ. ನಮ್ಮ ಸಂಸ್ಥಾನದಲ್ಲಿದ್ದ ಭೂಮಿಯಲ್ಲಿ ಬಹಳ ಭೂಮಿಯನ್ನು ಈಗಾಗಲೇ ಹಂಚಿಬಿಟ್ಟಿದ್ದಾರೆ. ಈಗ ಉಳಿದಿರುವುದು ಬಹಳ ಕಡಮೆ. ಈಗ ಇರತಕ್ಕ ಭೂಮಿಯೆಲ್ಲಾ 8 ಲಕ್ಷ ಎಕರೆಗಳು ಮಾತ್ರ. ನಾನು ಸ್ವಲ್ಪ ಹಂಚೋಣ ಎಂದು ಲೆಕ್ಕಪತ್ರಗಳನ್ನು ತರಿಸಿ ನೋಡಿದ್ದರಲ್ಲ, ಇನ್ನು ಸುಮಾರು ಕೇವಲ 8 ಲಕ್ಷ ಎಕರೆಗಳು ಉಳಿದಿರಬಹುದು ಎಂದು ತಿಳಿಯಬಂತು. ಆದೂ ಬಹಳ ಮಟ್ಟಿಗೆ ಸಂಶಯದಲ್ಲಿದೆ. ಎಷ್ಟೋ ಜಮೀನುಗಳು ರಿಲೀಸ್ ಆಗಬೇಕಾಗಿವೆ. ಆದ್ದರಿಂದ ಇಂಥವುಗಳನ್ನೆಲ್ಲಾ ಬಿಟ್ಟುಬಿಟ್ಟು ವಾಸ್ತವವಾಗಿ ಎಷ್ಟೆಷ್ಟು ಹಂಚಬಹುದು ಎಂಬ ಬಗ್ಗೆ ಪ್ರತಿ ಹಳ್ಳಿಯಲ್ಲೂ ನೋಡಿ ಅಂಕಿ ಅಂಶಗಳನ್ನು ಕಳುಹಿಸಿಕೊಡಿ ಎಂದು ಅಮಲ್ದಾರರುಗಳನ್ನು ಕೇಳಿದ್ದೇವೆ. ಅವರಿಂದ ಬಂದ ಮೇಲೆ ಏನಾದರೂ ಕಾರ್ಯಕ್ರಮ ಕೈಕೊಳ್ಳಬಹುದು.

ಅಮೇಲೆ ಭೂಮಿಯ ಹಂಚಿಕೆಯ ವಿಷಯದಲ್ಲಿ, "Priority" ಯಾವರೀತಿ ಇಟ್ಟುಕೊಂಡಿದ್ದೇವೆ, ಯಾರಿಗೆ ಮೊದಲು ಕೊಡಬೇಕು, ಯಾರಿಗೆ ಆಮೇಲೆ ಕೊಡಬೇಕು ಎಂಬ ಬಗ್ಗೆ ನಿಯಮಗಳಿವೆ. ಅದರಂತೆ ಅಧಿಕಾರಿಗಳು ನಡೆಯಲೇಬೇಕು. ಏನಾದರೂ ಹೆಚ್ಚು ಕಡಮೆಯಾದರೆ ರೈತರು ಅವರನ್ನ ಬಿಡುವಹಾಗಿಲ್ಲ. ಅಮಲ್ದಾರರು ಕೊಟ್ಟಿದ್ದರೆ ಡೆಪ್ಯೂಟಿ ಕಮಿಷನರ್‌ಲ್ಲಿಗೆ ಅಪೀಲುಹೋಗುತ್ತಾರೆ; ಡೆಪ್ಯುಟೀ ಕಮಿಷನರು ತಪ್ಪುಮಾಡಿದ್ದರೆ ಡಿವಿಜನಲ್ ಕಮಿಷನರ್‌ಬಳಿ ಹೋಗುತ್ತಾನೆ. ಕೊನೆಗೆ ಡಿವಿಜನಲ್ ಕಮಿಷನರು ಕೊಟ್ಟಿದ್ದರೆ ಅವರು ಕಾನೂನಿನ ಪ್ರಕಾರ ಕೊಟ್ಟಿಲ್ಲವೆಂದು ಹೇಳಿ ಸರ್ಕಾರಕ್ಕೆ ಬರುತ್ತಾನೆ. ಆದ್ದರಿಂದ ಕಾನೂನಿಗೆ ವಿರುದ್ಧವಾಗಿ ಹಂಚುವ ಸಂದರ್ಭಗಳೇ ಬರುವುದಿಲ್ಲ. ಆಮೇಲೆ ಭೂಮಿಇದ್ದೂ ಹಂಚದೆ ಇರುವುದು ಮತ್ತೂ ಅಪರೂಪ, ಏಕೆಂದರೆ, ದಾನ ಮಾಡುವುದರಲ್ಲಿ ನಮ್ಮ ಅಧಿಕಾರಿಗಳು ಶೂರರು; ಆದ್ದರಿಂದ ಏನಾದರೂ ತೊಂದರೆಗಳಿದ್ದರೆ, ಊರಿನಲ್ಲಿ ಪಾರ್ಟಿಗಳಿದ್ದರೆ ಅಥವಾ ಒಂದೇ ಜಮೀನಿಗೆ ನಾಲ್ಕಾರು ಜನ ಅರ್ಜಿ ಹಾಕಿಕೊಂಡಿದ್ದರೆ ಕೊಡುವುದು ಸ್ವಲ್ಪ ನಿಧಾನವಾಗುತ್ತದೆ, ಅಷ್ಟೆ. ಯಾರಿಗೆ ಕೊಡಬೇಕು ಯಾರಿಗೆ ಕೊಡಕೂಡದು ಎಂಬುದನ್ನು ಪರಿಶೀಲನೆ ಮಾಡಿಕೊಡಬೇಕಾಗುತ್ತದೆ. ಆದ್ದರಿಂದ ಊರುಗಳಲ್ಲಿ ಪಾರ್ಟಿವೈಷಮ್ಯಗಳಿಂದ ಈ ವಿಷಯಗಳು ನಿಧಾನವಾಗುತ್ತಿದೆಯೇವಿನಾ ಅಧಿಕಾರಿಗಳಿಂದ ಆಗುವುದಿಲ್ಲವೆಂದು ನಾನು ಹೇಳಬಲ್ಲೆ.

ಆದಕಾರಣ, ಭೂಮಿ ಹಂಚುವುದರಲ್ಲಿ ಎಷ್ಟು ಜಾಗ್ರತೆಯಾಗಬೇಕೋ ಅಷ್ಟು ಜಾಗ್ರತೆ ಮಾಡುವುದಕ್ಕೆ ಎಲ್ಲಾ ಏರ್ಪಾಡನ್ನೂ ಮಾಡಿದ್ದೇವೆ. ನನಗೂ ಭೂಮಿ ಹಂಚುವುದಕ್ಕೆ ತುಂಬ ಆಸೆಯಿದೆ. ಆದ್ದರಿಂದ ಈ ರೀತಿ ಭೂಮಿ ಹಂಚುವುದರಲ್ಲಿ ಏನಾದರೂ ಕೊಂದರೆಯಿವ್ದರೆ ಅದನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನಮಾಡುತ್ತೇನೆ.

ಮಾರನೆಯ ವಿಷಯವೆಂದರೆ "Abolition of Hereditary Rights of Village Officers" ಈ ಬಗ್ಗೆ ಅನೇಕ ಮಾನ್ಯ ಸದಸ್ಯರು ಸಲಹೆ ಕೊಟ್ಟಿರು. ಪಟೇಲು ಶ್ಯಾನುಭೋಗರ ವಿಚಾರದಲ್ಲಿ ಅವರ ಹುದ್ದೆಗಳನ್ನು ಕಿತ್ತುಕೊಳ್ಳುವ ವಿಷಯದಲ್ಲಿ ಈಗಾಗಲೇ ಕಾನೂನಿದೆ. ಕಾನೂನಿನ ರೀತ್ಯಾ ಎಲ್ಲಾ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುತ್ತಲಿದ್ದೇವೆ. ಈ "Hereditary Village Officers"ನ್ನು ತೆಗೆದ ಮೇಲೆ ನಮಗೆ ಸುಮಾರು 7,600 ಜನ "Village Accountantಗಳನ್ನು ನೇಮಿಸಿಕೊಳ್ಳಬೇಕಾಗಿದೆ. ಈ ಬಗ್ಗೆ ಅಪ್ಲಿಕೇಷ್ನ್ ಕರೆದಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಅಪ್ಲಿಕೇಷ್ನ್ ಕರೆದರೂ ಅರ್ಜಿಗಳೇ ಬರುತ್ತಿಲ್ಲ. ಇದಕ್ಕೆ ಕಾರಣ ಬಹುಶಃ ನಾವು ಕಾಣಿಸಿರುವ ಪರತ್ತುಗಳು. ವಯಸ್ಸು 40 ವರ್ಷಗಳ ಒಳಗಿರಬೇಕು, ಮತ್ತು SSLC ಆಗಿರಬೇಕೆಂದು ಹೇಳಿರುವುದರಿಂದ ಅನೇಕ ಹಳೆಯ ಶಾನುಭೋಗರು ಇದಕ್ಕೆ ಬರುವುದ ಕ್ಯಾಗುವುದಿಲ್ಲ. ಹಿಂದಿನ ಅನೇಕ ಶಾನುಭೋಗರು SSLC ಓದಿಯೇ ಇರುವುದಿಲ್ಲ. ಅಲ್ಲದೆ, ಈ ಜಾಗಕ್ಕೆ 60 ರೂಪಾಯಿ ಸಂಬಳಮಾತ್ರ ಗೊತ್ತುಮಾಡಿದ್ದೇವೆ. ಈಗ ಸಾಮಾನ್ಯವಾಗಿ ಇಲ್ಲಿ 60 ರೂಪಾಯಿ ಸಂಬಳ ತೆಗೆದುಕೊಳ್ಳುತಕ್ಕವನ್ನು 8 ವರ್ಷ ಕೆಲಸಮಾಡಿ ಒಂದು ಎರಡನೆಯ ದರ್ಜೆಯ ಗುಮಾಸ್ತನಾದರೂ ನೂರು-ನೂರಿಪ್ಪತ್ತು ಸಂಬಳ ಪಡೆಯುತ್ತಾನೆ. ಆದ್ದರಿಂದ ವಯಸ್ಸು, qualification ಮತ್ತು ಸಂಬಳ ಇವುಗಳನ್ನು Relax ಮಾಡುವುದನ್ನು ಯೋಚನೆ ಮಾಡಬೇಕಾಗಿದೆ. ಏಕೆಂದರೆ ಸಾಕಷ್ಟು ಅರ್ಜಿಗಳೇ ಬಂದಿಲ್ಲ. ಈ ತಿಂಗಳ ಕೊನೆಯ ಹೊತ್ತಿಗೆ ಎಲ್ಲರನ್ನೂ appoint ಮಾಡಿ ಆಗಸ್ಟ್ 1ನೆಯ ತಾರೀಖಿನಿಂದ ಮೂರುತಿಂಗಳ ಟ್ರೈನಿಂಗಿಗೆ ಕಳುಹಿಸಿ ಕೊಡಬೇಕಾಗಿತ್ತು. ವಿಲೇಜ್ ಅಕೌಂಟೆಂಟ್ ಕೆಲಸದ ಜೊತೆಗೆ ಇವರು ಪಂಚಾಯ್ತಿ ಸೆಕ್ರೆಟರಿಯ ಕೆಲಸವನ್ನೂ ನೋಡಿಕೊಳ್ಳಬೇಕಾಗಿರುವುದರಿಂದ ಇವರುಗಳಿಗೆ ಟ್ರೈನಿಂಗ್ ಕೊಡುವುದು ಅವಶ್ಯಕ. ಈಗಾಗಲೇ ಜಿಲ್ಲಾಧಿಕಾರಿಗಳು ಈ ಬಗ್ಗೆ ತಯಾರಿಕೆಮಾಡಿಕೊಂಡಿದ್ದಾರೆ. ಬಹುಶಃ ಡಿಸೆಂಬರ್ ಹೊತ್ತಿಗೆ ಸೆಲೆಕ್ಷನ್ ಮತ್ತು ಟ್ರೈನಿಂಗ್ ಎಲ್ಲಾ ಮುಗಿದು, ಬರುವ ಜನವರಿಯಿಂದ ಹೊಸ ಅಕೌಂಟೆಂಟ್‌ಗಳು ಕೆಲಸದಲ್ಲಿರುತ್ತಾರೆಂದು ಹೇಳಬಲ್ಲೆ. ಇದನ್ನು ಆದಷ್ಟು ಬೇಗ ಮಾಡಬೇಕೆಂಬುದೇ ನಮ್ಮ ಆಶಯ ಏಕೆಂದರೆ, Vested interestsನವರನ್ನು ಕಳುಹಿಸುವಾಗ Breathing Time ಕೂಡ ಕೊಡದೆ ಕಳುಹಿಸಿಬಿಡಬೇಕೆಂದು ಹೇಳುತ್ತಾರೆ. ಏಕೆಂದರೆ, ಹೇಗೂ ಹೊರಟುಹೋಗುತ್ತೇನೆಂದು ತಪ್ಪು ಲೆಕ್ಕಗಳನ್ನು ಬರೆಯುವುದು, ರಿಕಾರ್ಡ್‌ಗಳನ್ನು ಹಾಳುಮಾಡುವುದು ಎಲ್ಲಾ ಮಾಡುವುದು ಸಹಜ.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಅವರಿಗೆ ಜಮೀನುಗಳನ್ನಾದರೂ ಬಿಟ್ಟುಕೊಡಿ, 20ವರ್ಷದ ಕಂದಾಯ ತೆಗೆದುಕೊಂಡು.

ಶ್ರೀ ಎಂ. ವಿ. ಕೃಷ್ಣಪ್ಪ.—ಬಿಟ್ಟುಕೊಡುತ್ತೇವೆ. ಬಿಟ್ಟುಕೊಡಬೇಕೆಂಬುದೇ ನಮ್ಮ ಉದ್ದೇಶವಾಗಿದೆ.

Famine Relief ವಿಷಯ ಬಂತು. ಮಾನ್ಯ ಸದಸ್ಯರನೇಕರು ಮಾತನಾಡಿದ್ದಾರೆ. ಅದರಲ್ಲೂ ಶ್ರೀಮಾನ್ ಬಿ. ಎಲ್. ಗೌಡರು ತೀವ್ರವಾಗಿ ಈ ಬಗ್ಗೆ ನನ್ನ ಗಮನವನ್ನು ಸೆಳೆದಿದ್ದಾರೆ. ಆದರೆ ವಾಸ್ತವವಾಗಿ ಹೇಳುವುದಾದರೆ, ಸದ್ಯದಲ್ಲಿ ಕ್ಷಾಮವೆಂಬುದು ಎಲ್ಲಿಯೂ ಇಲ್ಲ. ಆಭಾವವಿದೆ ಅಷ್ಟೆ. ಆದೂ ಉತ್ತರ ಕರ್ಣಾಟಕದ ಕೆಲವು ಜಿಲ್ಲೆಗಳು, ಬೆಳಗಾಂ ಜಿಲ್ಲೆಯ ಕೆಲವು ಭಾಗಗಳು, ಬಿಜಾಪುರದ ಪೂರ್ತಾ, ಧಾರವಾಡದ ಜಿಲ್ಲೆಯ ಕೆಲವು ತಾಲ್ಲೂಕುಗಳು, ಗುಲ್ಬರ್ಗ ಜಿಲ್ಲೆಯ ಕೆಲವು ಭಾಗಗಳು ರಾಯಚೂರ್, ಬಳ್ಳಾರಿ ಜಿಲ್ಲೆಗಳ ಕೆಲವು ಭಾಗಗಳು ಮಾತ್ರ ಅಭಾವ ದೆಶೆಗೀಡಾಗಿವೆ. ಇತ್ತ ಚಿತ್ರದುರ್ಗ ತುಮಕೂರು ಕೋಲಾರ ಜಿಲ್ಲೆಗಳಲ್ಲಿ ಕ್ಷಾಮಕ್ಕೂ ಸುಭಿಕ್ಷಕ್ಕೂ ಹೆಚ್ಚು ವ್ಯತ್ಯಾಸ ಎಂದೂ ಇಲ್ಲ. ಏಕೆಂದರೆ ಅಭಾವ ಪರಿಸ್ಥಿತಿಯೆನ್ನುವಾಗ ಒಂದು ಮಳೆ ಬಂತೆಂದರೆ ಸುಭಿಕ್ಷವಾಗುತ್ತದೆ. ನಾನೂ, ಬಿ. ಎಲ್. ಗೌಡರು-ಇಬ್ಬರೂ ಕ್ಷಾಮ ಪ್ರದೇಶದಿಂದಲೇ ಬರುತ್ತಿದ್ದೇವೆ. ನಮ್ಮಿಬ್ಬರಲ್ಲಿ ಯಾರನ್ನು ನೋಡಿದರೂ ಕ್ಷಾಮದ ದೇಶದಿಂದ ಬರುವಂತೆ ಕಾಣುವುದಿಲ್ಲ ಬಹುಶಃ ನಾವೇ ಅಲ್ಲಿನ ಕ್ಷಾಮಕ್ಕೆ ಕಾರಣರೋ ಎಂಬಂತೆ ನಾವಿದ್ದೇವೆ. ಆದರೂ ನಮಗೆ ಅಲ್ಲಿನ ಅನುಭವವಿದೆ. ಆ ಪ್ರದೇಶದಲ್ಲಿ ಕ್ಷಾಮ ಪದೇ ಪದೇ ಬರುತ್ತದೆ. ವರ್ಷೇವರ್ಷೇ ಆಷಾಢಮಾಸದಲ್ಲಿ ಕ್ಷಾಮದ ಪರಿಸ್ಥಿತಿಗಳು ಅಲ್ಲ ತಲೆದೋರುತ್ತಿರುತ್ತವೆ. ನಾನು ಕೆಲವು ವರ್ಷಗಳು ಕೇಂದ್ರ ಸರ್ಕಾರದಲ್ಲಿ ಮಂತ್ರಿಯಾಗಿದ್ದೆ. ಕ್ಷಾಮದ ಬಾಬು ನನ್ನ ಆಡಳಿತದಲ್ಲೇ ಇತ್ತು. ಅದರಿಂದ ಬಂದಿರುವ ಅನುಭವದಿಂದ ನಾನು ಹೇಳುತ್ತಿದ್ದೇನೆ. ಆಷಾಢಮಾಸದಲ್ಲಿ ಈ ಭಾಗದಲ್ಲಿ ಕ್ಷಾಮದ ಚಿಹ್ನೆಗಳು ತಲೆದೋರುತ್ತವೆ. ಒಂದು ಮಳೆ ಬಂತೆಂದರೆ ಎಲ್ಲಾ ಸರಿಹೋಗುತ್ತದೆ. ನಮ್ಮ ರೈತರ ಸ್ವಭಾವವೂಕೂಡ ಯಾವಾಗಲೂ ಕೈಯ್ಯೊಡ್ಡುವುದೇ. ಆದ್ದರಿಂದ ಆ ಪ್ರದೇಶವಿರಲಿ. ಉತ್ತರ ಕರ್ನಾಟಕದ ಬೆಳಗಾಂ, ಬಿಜಾಪುರ, ಧಾರವಾಡ ಮತ್ತು ಗುಲ್ಬರ್ಗಗಳಲ್ಲಿ ಈಗಾಗಲೇ ಅನೇಕ ರಿಲೀಫ್ ಕಾಮಗಾರಿಗಳು ನಡೆಯುತ್ತಿವೆ. ಬಿಜಾಪುರದಲ್ಲಿ ಅಂತೂ ಹದಿನಾಲ್ಕು ದೊಡ್ಡ ದೊಡ್ಡ ಕೆರೆಗಳ ಕೆಲಸ ನಡೆಯುತ್ತಿದೆ. ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು ಈ ನಾಲ್ಕು ಡಿವಿಜ಼ನ್‌ಗಳಲ್ಲಿ ರಿಲೀಫ್ ವರ್ಕ್ಸ್ ನಡೆಸುವ ಬಗ್ಗೆ ಇಟ್ಟಿದ್ದೇವೆ. ಇದರ ಜೊತೆಗೆ ತಕ್ಕಾವಿ ಲೋನ್‌ಗಳನ್ನೂ ಕೂಡ ಉದಾರವಾಗಿ ಕೊಡುತ್ತಿದ್ದೇವೆ.

2-30 P.M

ಈಗ ಬಂದಿರುವ ಸೂಚನೆಗಳ ಪ್ರಕಾರ ತುಮಕೂರಿನ ಕೆಲವು ಭಾಗಗಳಲ್ಲಿ, ಅದರಲ್ಲೂ ನಮ್ಮ ಮಾನ್ಯ ಮುಕ್ಕಣ್ಣಪ್ಪನವರ ಕ್ಷೇತ್ರವಾದ ಸಿರಾದಲ್ಲಿ, ಬೆಳಗಾಮಿನ ಕೆಲವು ಭಾಗಗಳಲ್ಲಿ ಅಭಾವ ಪರಿಸ್ಥಿತಿ ಇದೆ ಎಂದು ತಿಳಿದು ಬಂದಿದೆ. ಹಾಗೇ ಚಿತ್ರದುರ್ಗದ ಕೆಲವು ಭಾಗಗಳಲ್ಲಿ ಇಂತಹ ಪರಿಸ್ಥಿತಿ ಇದೆ. ಕೆಲವು ಮಾನ್ಯ ಸದಸ್ಯರುಗಳು ಈಗೇಳೆಂಟು ದಿವಸಗಳ ಹಿಂದೆ ನನಗೆ ಬಂದು ಹೇಳಿದರು. ಅಲ್ಲಿ ಸುಮಾರು ಎಪ್ಪತ್ತೈದು ಸಾವಿರ ರೂಪಾಯಿಗಳಷ್ಟು ಹಣವನ್ನು ಈಗಾಗಲೇ ಕೊಟ್ಟಿದೆ. ಆದರಂತೆ ರಿಲೀಫ್ ವರ್ಕ್‌ಗಳೂ ಆ ಪ್ರಕಾರ ಆಗುತ್ತವೆ. ಇನ್ನೂ ಹೆಚ್ಚಾಗಿ ಆಗಬೇಕೆಂದು ಮಾನ್ಯ ಸದಸ್ಯರು ಈಗ ಹೇಳುತ್ತಿದ್ದಾರೆ. ಸದ್ಯದಲ್ಲೇ ನಮ್ಮ ಮುಖ್ಯ ಮಂತ್ರಿಗಳು ಆ ಕಡೆ ಹೋಗುತ್ತಿರುವುದರಿಂದ, ಅಲ್ಲಿಗೆ ಹೋಗಿ,

(ಶ್ರೀ ಎಂ. ವಿ. ಕೃಷ್ಣಪ್ಪ)

ಪರಿಸ್ಥಿತಿಯನ್ನು ತಿಳಿದುಕೊಂಡು ಏನು ಹೇಳುತ್ತಾರೋ ನೋಡಿಕೊಂಡು ಆದಕ್ಕೆ ತಕ್ಕ ಕೆಲಸ ಕಾರ್ಯಗಳನ್ನು ಮಾಡಲು ಏರ್ಪಾಡು ಮಾಡುತ್ತೇವೆ. ನಮ್ಮ ಕೇಂದ್ರ ಸರಕಾರದವರೂ ಸಾಕಾದಷ್ಟು ಹಣ ಕಾಸಿನ ಸಹಾಯ ಮಾಡುತ್ತಾರೆ. ನಮ್ಮ ಸರಕಾರಕ್ಕೂ ಸಾಧ್ಯವಾದಷ್ಟು ಮಾಡಲು ಶಕ್ತಿ ಇದೆ. ಆದರೆ ಇಲ್ಲಿ ಜನಗಳಿಗೆ ಅಭಾವದಿಂದ ತೊಂದರೆಯಾಗಿದೆ, ಎಂದು ಅಂತಹ ಕ್ಷಾಮ ಡಾಮರಗಳು ಬಂದು ಉಪವಾಸದಿಂದ ಸಾಯುವ ಸ್ಥಿತಿ ಬಂದಿಲ್ಲ. ಇಷ್ಟು ಮಾತ್ರ ಹೇಳಬಲ್ಲೆ. ಹಾಗೇನಾದರೂ ಇದ್ದರೆ ಅದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಅದರಲ್ಲೇನೂ ಅನುಮಾನವಿಲ್ಲ. ರಿಲೀಫ್ ವರ್ಕ್ಸ್‌ಗಳನ್ನು ತೆಗೆದುಕೊಳ್ಳುತ್ತೇವೆ. ಆಧಷ್ಟು ಸೂಕ್ತವಾದ ವ್ಯವಸ್ಥೆಗಳನ್ನು ಒದಗಿಸಿಕೊಡುತ್ತೇವೆ.

ಇಷ್ಟನ್ನು ಹೇಳಿ ಇಲ್ಲಿ ನಮ್ಮ ಇಲಾಖೆಯ ಬಗ್ಗೆ ಅಷ್ಟಾಗಿ ಟೀಕೆ ಮಾಡಿಲ್ಲ. ನಮ್ಮ ಇಲಾಖೆಯ ಬಗ್ಗೆ ಬಹಳ ಮಮತೆಯಿಂದಲೂ, ಪ್ರೀತಿಯಿಂದಲೂ, ವಿಶ್ವಾಸದಿಂದಲೂ ಮಾತನಾಡಿದ್ದಾರೆ. ಇದರಲ್ಲಿ ರ್ಯಾಂಡು ರಿಫಾರಂಸ್ ಆಕ್ಟು ಜಾರಿಗೆ ಬೇಗನೆ ತರ ಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಇದಕ್ಕೆ constitutional difficulty ಬಂದಿದೆ. ಈ ಬಗ್ಗೆ ಮೇಲ್ಮನೆಯಲ್ಲೂ ಕೂಡ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಇದನ್ನು ಬರುವ ವರ್ಷದ ಫೆಬ್ರುವರಿ-ಮಾರ್ಚಿ ತಿಂಗಳೊಳಗಾಗಿ ಈ ಕಾನೂನನ್ನು ಜಾರಿಗೆ ತರ ಬಹುದು ಎಂದು ಆಗಲೇ ಉತ್ತರ ಹೇಳಿದ್ದೇನೆ. ನಮ್ಮ ರೆವಿನ್ಯೂ ಇಲಾಖೆಯ ಬಗ್ಗೆ ಅನೇಕ ಸದಸ್ಯರುಗಳು ಕೆಲವು ಸಲಹೆಗಳನ್ನೂ ಕೊಟ್ಟರು. ರೆವಿನ್ಯೂ ಇಲಾಖೆ ಎನ್ನುವುದು.

> "The Revenue Department is known as the mother of all the Departments. Unfortunately the mother seems to have become so old that the father has started neglecting her and he has thought of a second wife. That second wife is the Development Department".

ರೆವಿನ್ಯೂ ಇಲಾಖೆಯಲ್ಲಿ ಸ್ಥಳದಲ್ಲೇ ಇರುವ ಅಧಿಕಾರಿಗಳು ಎಂದರೆ ಅಮಲ್ದಾರರುಗಳು. ಆದರೆ ಇವರ ವಾಸಕ್ಕೆ ಮನೆ ಇಲ್ಲ. ಬೇರೆ ಎಲ್ಲಾ ಅಧಿಕಾರಿಗಳಿಗೂ ಮನೆಗಳು ಇವೆ. ಸ್ಥಳದಲ್ಲಿದ್ದು ಹೆಚ್ಚಾಗಿ ಕಾರ್ಯವನ್ನು ಮಾಡುವವರು ಅಮಲ್ದಾರರುಗಳು. ಇವರಿಗೆ ಮನೆ ಇಲ್ಲ. ಏರೇಜು ರೆವಲ್ ವರ್ಕರುಗಳಿಗೆ, ಬಿ. ಡಿ. ಓ. ಗಳಿಗೆ ಮನೆಗಳಿವೆ. ಅವರಿಗೆ ಜೀಪುಗಳಿವೆ. ಆದರೆ ಇವರಿಗಿಲ್ಲ. ಬಹುಶಃ ಮೊದಲನೆಯ ಹೆಂಡತಿಯಲ್ಲಿ ವಿಶ್ವಾಸವಿಲ್ಲದೆ, ಎರಡನೇ ಹೆಂಡತಿಯಲ್ಲಿ ವಿಶ್ವಾಸವಿಟ್ಟು ಏನೇನು ಮಾಡಬೇಕೋ ಅದನ್ನು ಮಾಡುತ್ತಿದ್ದಾರೆ. ಒಂದು ತಾಲ್ಲೂಕಿನಲ್ಲಿ ಮುಖ್ಯಸ್ಥರಾಗಿ ಜನತೆಗೆ ಎಷ್ಟೋ ಕೆಲಸಗಳನ್ನು ಮಾಡುವವರು ಮುಖ್ಯವಾಗಿ ಅಮಲ್ದಾರರುಗಳು. ಒಬ್ಬರು ನ್ಯಾಯವಾಗಿ ತಾಲ್ಲೂಕು ಲೆವೆಲ್ಲಿನಲ್ಲಿ ಕೆಲಸ ಮಾಡುವ ಅಧಿಕಾರಿಗಳು, ಮತ್ತು ಜಿಲ್ಲಾ ಲೆವಲ್ಲಿನಲ್ಲಿ ಕೆಲಸ ಮಾಡುವ ಜಿಲ್ಲಾಧಿಕಾರಿಗಳು ಬಹಳ ದಕ್ಷರೂ, ಆಡಳಿತದ ಅನುಭವವನ್ನು ಪಡೆದಿರುವವರು ಸ್ವಲ್ಪ ಮಮತೆಯಿಂದ, ಕರುಣೆಯಿಂದ ಜನರಲ್ಲಿರುವವರು ಇದ್ದರೆ ಮಂತ್ರಿಗಳ್ಯಾರೂ ಸಾಮಾನ್ಯ ಜನಗಳಿಗೆ ಬೇಕಾಗುವುದಿಲ್ಲ. ನಮ್ಮ ರಾಜ್ಯದಲ್ಲಿರುವ ಅಮಲ್ದಾರರುಗಳು ಪ್ರೀತಿಯಿಂದ ಜನಗಳೊಡನೆ ವರ್ತಿಸುತ್ತಿದ್ದರೆ ನೂರರಲ್ಲಿ. ತೊಂಬತ್ತರಷ್ಟು ಜನ ಬಹಳ ವ್ಯತ್ಯಾಸವುಳ್ಳವರಾಗಿರುತ್ತಾರೆ. ಹಾಗೆ ಎಷ್ಟೋ ಕಡೆ ಅಮಲ್ದಾರರುಗಳು ಕೆಲಸ ಮಾಡಿದರೆ ಬಹಳ ಸಂತೋಷವಾಗುತ್ತದೆ. ಹಿಂದಿನ ಕಾಲದಲ್ಲಿ ಜನ ಅಮಲ್ದಾರರು ಕುದುರೆಯ ಮೇಲೆ ಏರಿ ಬರುತ್ತಿರುವುದನ್ನು ನೋಡಿ ಬಹಳ ಸಂತೋಷ ಪಡುತ್ತಿದ್ದರು. ಅದರಲ್ಲೂ ಕೆಲವು ಜನ ಕುದುರೆಯ ಕಾಲಿನಿಂದ ತುಳಿಸಿಕೊಂಡು ನೋವಾದರೂ, ಅವರನ್ನು ನೋಡಿ ನಗುತ್ತಾ ಹೋಗುತ್ತಿದ್ದರು. ಅಂತಹ ಕಾಲ ಇತ್ತು. ಈಗ ಆ ಕಾಲ ಇಲ್ಲ, ಬದಲಾಗಿದೆ.

ಶ್ರೀಮಾನ್ ರೇವಣಸಿದ್ದಪ್ಪನವರು ಐ. ಎ. ಎಸ್. ಅಧಿಕಾರಿಗಳಾಗಿ ಬರುವವರು ವಯಸ್ಸಾದವರಲ್ಲ. ಬರೀ ಹುಡುಗರೇ ಬರುತ್ತಾರೆಂದು ಹೇಳಿದರು. ಇಲ್ಲಿಯ ಸದಸ್ಯರಾಗಿಯೂ, ವಯಸ್ಸಾದವರಲ್ಲದೇ ಇರುವವರು ಇಲ್ಲಿಗೆ ಪೆಂಬರುಗಳಾಗಿ ಬರುತ್ತಿದ್ದಾರೆ ಮತ್ತು ಮಂತ್ರಿಗಳೂ ಆಗಿದ್ದಾರೆ. ಅಲ್ಲದೆ ನಮ್ಮ ದೇಶಕ್ಕೆ ಅನೇಕ ಅಧಿಕಾರಿಗಳು ಬೇಕಾಗಿದ್ದಾರೆ. ಪೂರ್ವ ಕಾಲದಲ್ಲಿ ಅಮಲ್ದಾರರುಗಳು, ಜಿಲ್ಲಾಧಿಕಾರಿಗಳು ಮತ್ತು ಮಂತ್ರಿಗಳು ಹಾಕುತ್ತಿದ್ದ ಉಡುಪು ಎಂದರೆ ಜರೀ ಪೇಟಾ ಮತ್ತು ಕಪ್ಪು ಕೋಟನ ಡ್ರೆಸ್ಸು. ಆದರೆ ಈಗ ಐ. ಎ. ಎಸ್. ಅಧಿಕಾರಿಗಳಾಗಿ ಹುಡುಗರು ಬರುತ್ತಿದ್ದಾರೆ. ಈಗಿನ ಕಾಲದ ಪರಿಸ್ಥಿತಿ ಹಾಗಿದೆ. ಅಲ್ಲದೇ ಈ ರೀತಿಯಾದ ಅಧಿಕಾರಿಗಳನ್ನು ಕೇಂದ್ರ ಸರಕಾರದವರು ಇಷ್ಟಿಷ್ಟನ್ನು ಇಂತಹ ದೇಶಗಳಿಗೆ ಕಳುಹಿಸಬೇಕೆಂದು ಕೋಟಾ ಇದೆ. ಆದರಂತೆ ಕಳುಹಿಸುತ್ತಾರೆ. ನಾನು ಹಿಂದೆ ಹದಿನೆಂಟು ವಯಸ್ಸಿನವನಾಗಿದ್ದಾಗ ಮೈಸೂರಿನಲ್ಲಿದ್ದರೆ ಪ್ರಸೆಂಚೆಟೀವ್ ಅಸೆಂಬ್ಲಿ ಪೆಂಬರುಗಳು ಹೇಗೆ ಬರುತ್ತಿದ್ದರು ಎನ್ನುವುದನ್ನು ನೋಡಿದ್ದೆ. ಅವರು ಕಟ್ಟಿಕೊಂಡು ಬರುತ್ತಿದ್ದ ಪೇಟಾ ಮತ್ತು ಠೀವಿ ಹೇಗಿತ್ತು ಎನ್ನುವುದನ್ನೂ ನೋಡಿದ್ದೇನೆ. ಆದರೆ ಈಗ ಇಲ್ಲಿ ಮಾನ್ಯ ಶ್ರೀ ರೇವಣ್ಣಸಿದ್ದಪ್ಪನವರು ಹಾಕಿಕೊಂಡಂತೆ ಅರ್ಧ ಷರ್ಟನಲ್ಲಿ ಬಂದಿದ್ದರೆ ಆಗ ಹೊರಕ್ಕೆ ಕಳುಹಿಸಿ ಬಿಡುತ್ತಿದ್ದರು. ಆಗಿನ ಕಾಲದಲ್ಲಿ ಅಷ್ಟು ಕಟ್ಟುನಿಟ್ಟಿದ್ದಿತ್ತು. ಆಗ ಅಡ್ಮಿನಿಸ್ಟ್ರೇಟೀವ್ ರೆಸ್‌ಪಾನ್ಸಿಬಲಿಟೀಸ್ ಜಾಸ್ತಿಯಾಗಿದ್ದುವು. ಆಗ ಒಂಬತ್ತು ಜಿಲ್ಲಾಧಿಕಾರಿಗಳಿದ್ದರು. ಅವರ ಕೈಕೆಳಗೆ ನೂರು, ನೂರಿಪ್ಪತ್ತು ಮಂದಿ ಅಸಿಸ್ಟೆಂಟು ಕಮಿಷನರುಗಳು ಮತ್ತು ಎಷ್ಟೋ ಜನ ಅಮಲ್ದಾರರುಗಳಿದ್ದರು. ಈಗ ಐ. ಎ. ಎಸ್. ಅಧಿಕಾರಿಗಳೆಂದು ನಮಗೆ ಕಳುಹಿಸಿರುವವರ ಪೈಕಿ ಅನುಭವಿಗಳು ಅನೇಕರಿದ್ದಾರೆ. ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಅಮೇರಿಕಾ ದೇಶ ಒಂದು ದೊಡ್ಡ ರಾಷ್ಟ್ರ, ಅಂತಹ ರಾಷ್ಟ್ರದ ಅಧ್ಯಕ್ಷರಾಗಿರುವ ಕೆನಡಿಯವರಿಗೆ ಕೇವಲ ನಲವತ್ತಮೂರು ವರ್ಷ. ಹಾಗೆ ನಮ್ಮ ದೇಶದಲ್ಲಿ ರಾಜ್ಯಾಡಳಿತವನ್ನು ವಹಿಸುತ್ತಿರುವವರು ಎಲ್ಲ ಯುವಕರಾಗಿ ಬರಬಹುದು.

The country wants it. You cannot help it. ಈ ರೀತಿ ಚಿಕ್ಕವಯಸ್ಸಿನ ಅಧಿಕಾರಿಗಳು ಮೈಸೂರೊಂದಕ್ಕೆ ಬರುತ್ತಿಲ್ಲ. ಮದರಾಸು ಸರಕಾರಕ್ಕೂ ಕಳುಹಿಸಿದ್ದಾರೆ. ಅವರು ಒಪ್ಪಿಕೊಂಡಿದ್ದಾರೆ. ಐ. ಎ. ಎಸ್. ಅಧಿಕಾರಿಗಳನ್ನು ಕಂಪಲ್ಸರಿಯಾಗಿ ಎಲ್ಲ ರಾಜ್ಯಗಳಿಗೂ ಕಳುಸುತ್ತಾರೆ. ಆದ

ರಂತೆ ಕೋಟಾ ಇದೆ. ಅಂತಹವರನ್ನು ನಮಗೆ ಕಳುಹಿಸುವುದು ಬೇಡಿ ಎನ್ನುವ ಹಾಗಿಲ್ಲ. ಅನೇಕರು ಅನುಭವವುಳ್ಳವರು ಆಗಿರುತ್ತಾರೆ; ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ.

ಒಂದು ವಿಷಯವನ್ನು ಇಲ್ಲಿ ಹೇಳಬೇಕಾಗುತ್ತದೆ. ನಮ್ಮ ಮಾನ್ಯ ಸದಸ್ಯರಾದ ಶ್ರೀಯುತರಾದ ಬ್ಯೆರೇಗಾಡರು ಮತ್ತು ರೇವಣ್ಣ ಸಿದ್ದಪ್ಪನವರೂ, ಕೇಳಿದರು, ಅನುಭವವಿಲ್ಲದೆ ಇರುವವರು ಆಡಳಿತದ ಕೆಲಸವನ್ನು ಹೇಗೆ ಮಾಡುತ್ತಾರೆ ಎಂದು. ಸ್ವಲ್ಪ ಕಾಲ ಕಳೆದ ಮೇಲೆ ಸ್ವಲ್ಪ ಅನುಭವ ಬರುತ್ತದೆ. ನಾವೂ ಕೂಡ ಹಾಗೆ ಅನುಭವವನ್ನು ಪಡೆದು ಮಂತ್ರಿಗಳಾಗಿದ್ದೇವೆ. ಮಂತ್ರಿಗಳಾಗಿರುವುದರಿಂದ ನಮಗೂ ಜವಾಬುದಾರಿ ಬರುತ್ತದೆ. ಅದರಿಂದ ಸ್ವಲ್ಪ ಅನುಭವಾಗಿದೆ.

> "After all you are people with out administrative experience, Whereas the Congress Party which is the ruling party has 15 years of administrative experience, you have no administrative experience at all.

ಮಾನ್ಯ ಮುಕ್ಕಣ್ಣಪ್ಪನವರ ವಿಷಯವಾಗಿ ಹೇಳಬೇಕಾದರೆ ಅವರು ನಾನೂ ಒಳ್ಳೆಯ ಸ್ನೇಹಿತರು. ಹಿಂದೆ ಒಂದು ಸಲ ಒಂದೇ ಪೋಟಿನಿಂದ 1944 ರಲ್ಲಿ ಸೋತು ಹೋದರು. ಈಗ ಸ್ವರಾಜ್ಯ ಬಂದ ಮೇಲೆ ಅಸೆಂಬ್ಲಿಯ ಸದಸ್ಯರಾಗಿ ಅವರು ಬಂದಿದ್ದಾರೆ. ಅವರು ಕೋಪಮಾಡಿಕೊಳ್ಳದೆ ಹೋದರೆ ಒಂದು ಮಾತನ್ನು ಶ್ರೀವಾರ್ನ ಗುಂಡಪ್ಪನವರು ಬರೆದ "ಮಂಕು ತಿಮ್ಮನ ಕಗ್ಗ" ದಲ್ಲಿರುವುದನು ಹೇಳುತ್ತೇನೆ. ಅದು ಹೀಗಿದೆ.

> "ಎದ್ದೆದ್ದು ಬೀಳುತಿಹ ಗುದ್ದಾಡಿ ಸೋಲುತಿಹೆ। ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ॥ ಉದ್ಧರಿಸುವೆನು ಜಗವನೆನ್ನುತಿಹನಖನೆ! ನಿನ್ನುದ್ಧಾರ ಪೆಷ್ಮಾಯ್ತೋ—ಮಂಕು ತಿಮ್ಮ॥"

Sri C. J. MUCKANNAPPA (Sira).—After all, Sri Krishnappa, having been the Deputy Minister at the Centre, for ten years, has one administrative experience. But what is the experience of Srimati Subbamma? Sri Hutchegowda has greater wisdom than Sri Krishnappa.

Sir, he has failed to understand what Sri D. V. Gundappa has written.

ಶ್ರೀ ಎಂ. ವಿ. ಕೃಷ್ಣಪ್ಪ.—ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ। ಉದ್ಧರಿಸುವೆನು ಜಗವನೆನ್ನುತಿಹೆ। ಆದರೆ ನಿನ್ನ ಉದ್ಧಾರವೆಷ್ಟಾಯ್ತೋ? ಮಂಕುತಿಮ್ಮ ಎಂಬುದಾಗಿ ಅವರು ಹೇಳಿರತಕ್ಕದ್ದು ಬಹಳ ಚೆನ್ನಾಗಿ ಹೊಂದಾವಣೆಕೆ ಆಗುತ್ತಿದೆ.

Mr. SPEAKER—It is not for Sri Muckannappa. It is for Manku Thimma.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಡಿ. ವಿ. ಜಿ. ಅವರು ಆ ಮಾತುಗಳನ್ನು ಯಾವ ಸಂದರ್ಭದಲ್ಲಿ ಹೇಳಿದ್ದಾರೆಂಬುದನ್ನು ತಿಳಿದುಕೊಳ್ಳುವುದಕ್ಕೂ ಶಕ್ತಿ ಬೇಕು. He has miserably failed to understand under what circumstances he wrote it.

ಶ್ರೀ ಎಂ. ವಿ. ಕೃಷ್ಣಪ್ಪ.—ಮೆಂಬರುಗಳಾಗಿದ್ದವರು ಮಂತ್ರಿಗಳಾದ ಮೇಲೆ ಸ್ವಲ್ಪ ಬದಲಾವಣೆಯಾಗುತ್ತಾರೆ. ಅದು ಸಹಜವಾದುದೇ. ಅಂದಾಕ್ಷಣಕ್ಕೆ ಸದಸ್ಯರು ಜವಾಬ್ದಾರಿಯಿಂದ ಮಾತನಾಡುವುದಿಲ್ಲ ಎಂದು ನಾನು ಹೇಳಲಾಗಿ. ಸದಸ್ಯರುಗಳೂ ಕೂಡ ಒಳ್ಳೆ ಅನುಭವ ಪಡೆದಿರುತ್ತಾರೆ. I respect the Opposition. I have been trained in the Parliament for 10 years and I therefore respect the opposition. ಮಾನ್ಯ ಸದಸ್ಯರುಗಳ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ ಎಂದು ಇಷ್ಟು ಹೇಳಿ ಈಗ ನಾನು ನಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗೆ ತಾವೆಲ್ಲರೂ ತಮ್ಮ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ,

Sri K. LAKKAPPA (Hebbur).—The Hon'ble Minister spoke a lot of things. With respect to Jodidars evicting the tenants and writing phawanis in somebody else's name and trying to evict the tenants, what action has been taken by the Government?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲಿಯತನಕ ಯಾರೂ ಈ ಇನಾಂ ಅಬಾಲಿಷ್ಟ್ ಪ್ರಶ್ನೆಯನ್ನೇ ಎತ್ತಲಿಲ್ಲ. ಅದಕ್ಕಾಗಿ ನಾನು ಈ ಬಗ್ಗೆ ಉತ್ತರ ಕೊಡತಕ್ಕ ಅಗತ್ಯ ಬೀಳಲಿಲ್ಲ. ಜೋಡಿದಾರರು ಚೆನೆಂಟ್ಸನ್ನು ಓಡಿಸಲು ಆಸ್ಪದವಿಲ್ಲದಂತೆ ಅನೇಕ ಕಾನೂನುಗಳನ್ನು ಜಾರಿಗೆ ತರಲಾಗಿದೆ. ಅವರಿಗೆ ಈಗ ಕಾನೂನು ರಕ್ಷಣೆ ಇರುವುದರಿಂದ ಯಾರು ಈ ಬಗ್ಗೆ ಭಯಪಡ ಬೇಕಾಗಿಲ್ಲ ಎಂದು ಹೇಳುತ್ತೇನೆ.

ಶ್ರೀ ಬಿ. ಎಲ್. ಗೌಡ (ಚನ್ನಗಿರಿ).—ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು 4-5 ವರ್ಷಗಳಿಂದಲೂ ಸರಿಯಾಗಿ ಮಳೆ ಬೆಳೆಗಳಾಗುತ್ತಿಲ್ಲ. ಈ ವರ್ಷವೂ ಕೂಡ ಇಲ್ಲಿಯವರೆಗೂ ಮಳೆ ಬಾರದೆ ಇನ್ನೂ ಬಿತ್ತನೆಗಳೇ ಆಗಿಲ್ಲ. ಹೀಗಿದ್ದರೂ ಹಿಂದಿನ ಸಾಲುಗಳಲ್ಲಿ ಆ ಜಿಲ್ಲೆಯ ರೈತರಿಗೆ ಕಂದಾಯವನ್ನು ಏಕೆ ಮಾಫಿ ಮಾಡಲಲ್ಲ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ವಿಚಾರವನ್ನು ಮಾನ್ಯ ಸದಸ್ಯರು ನನ್ನಲ್ಲಿ 4-5 ಆವರ್ತಿ ಚರ್ಚೆ ಮಾಡಿದ್ದಾರೆ. ಆ ಜಿಲ್ಲೆಯಲ್ಲಿ ಬೆಳೆ ಆಗದೆ ಇರತಕ್ಕ ತರೀ ಭೂಮಿಗಳಿಗೆ ಅರ್ಧ ಕಂದಾಯವನ್ನು ರಿಮಿಷ್ಟ್ ಮಾಡಲು ಬರೆದಿದ್ದೇವೆ. ಆದರೆ ಖುಷ್ಕಿ ಜಮೀನುಗಳ ಕಂದಾಯವನ್ನು ಸಸ್‌ಪೆಂಡ್ ಮಾಡಿಲ್ಲ. ಇದನ್ನು ಪಹಣಿ ಆಧಾರದ ಮೇಲೆ ಮಾಡಲಾಗುತ್ತಿದೆ. ನನಗೆ ಆ ಜಿಲ್ಲೆಯಿಂದ 20-30 ಟೆಲಿಗ್ರಾಂಗಳೂ ಕೂಡ ಬಂದಿದ್ದವು. ಆದರೆ ನಾವು ಇಲ್ಲಿ ಕುಳಿತುಕೊಂಡು ಯಾವ ಆಧಾರದ ಮೇಲೆ ಮಾಡುವುದು? ನಮಗೆ ಹಾಲಿ ಒದಗಿಸಿರತಕ್ಕ ಪಹಣಿಗಳ ಆಧಾರದ ಮೇಲೆ ಕೆಲವು ಕಡೆ ಖುಷ್ಕಿ ಜಮೀನುಗಳ ಕಂದಾಯವನ್ನು ಸಸ್ಪೆಂಡ್ ಮಾಡಲಾಗಿದೆ. ಹೀಗೆ ಕಂದಾಯ ಸಸ್ಪೆಂಡ್ ಮಾಡಬೇಕಾಗಿದ್ದರೆ ಆರಾಣಿಗಿಂತ ಕಡಮೆ ಬೆಳೆ ಆಗಿರಬೇಕು.

ಶ್ರೀ ಎಚ್. ಆರ್. ಕೇಶವಮೂರ್ತಿ.—ತಾವು ಭೋಗರು ಏನು ಪಹಣಿ ಬರೆಯರೆ ಅದನ್ನೇ ನೀವೂ ಒಪ್ಪಿಕೊಳ್ಳುತ್ತೀರೋ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೊದಲೇನೋ ಈ ಪಹಣಿ ಲೆಕ್ಕಗಳನ್ನು ಪಟೇಲ್ ಶ್ಯಾನುಭೋಗರು ಬರೆಯುತ್ತಿದ್ದರು. ಈಗ ಅವರು ಈ ಕೆಲಸವನ್ನು ಗ್ರಾಮ ಪಂಚಾಯ್ತಿ ಅವರ ಸಮಕ್ಷಮ ನಡೆಸ ಬೇಕಾಗಿದೆ. ಅನಂತರ ಅದನ್ನು ರೆವಿನ್ಯೂ ಇನ್ಸ್ಪೆಕ್ಟರು ಇನ್ಸ್ಪೆಕ್ಟ್ ಮಾಡುತ್ತಾರೆ. ಅನಂತರ ಆಕ್ಸ್ಟೋಬರ್ ವೇಳೆಗೆ ತಾಲ್ಲೂಕ್ ಜಮಾಬಂದಿ ನಡೆಯುತ್ತದೆ. ಅದರ ನಂತರ ಅಮಲ್ದಾರರು ಇನ್ಸ್ಪೆಕ್ಟ್ ಮಾಡುತ್ತಾರೆ. ಆನಂತರ ಡಿಸೆಂಬರ್ ವೇಳೆಗೆ ಹುಜೂರ್ ಜಮಾಬಂದಿ ನಡೆಯುತ್ತದೆ. ಆನಂತರ ಈ ರೀಮಿಷ್ಷ ಮತ್ತು ಸಸ್ಪೆನ್ಷ್ಷಗಳ ವಿಚಾರವನ್ನು ಆಜ್ಞೆರಾಗಿ ತೀರ್ಮಾನ ಮಾಡುತ್ತಾರೆ. ಇಷ್ಟೆಲ್ಲ ಪ್ರೊಸೀಜರಿದೆ. ಮೊದಲಿನ ಹಾಗೆ ಚಾವಡಿ ಯಲ್ಲಿ ಕುಳಿತು ಬರೆಯುತ್ತಿದ್ದಹಾಗೆ ಈಗ ಪಹಣಿ ಬರೆಯುತ್ತಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—S. D. O. ಮತ್ತು ಅಮಲ್ದಾರರು ಬಲವಂತ ಮಾಡಿ ಬರೆದರೆ ಅದಕ್ಕೇನು ಮಾಡುವುದು?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಅಂಥಾ ಪರಿಸ್ಥಿತಿ ಯೇನೂ ಇಲ್ಲ. ಹಿಂದಿನ ಕಾಲದಲ್ಲಾದರೋ ರಾಜ್ಯಾದಾಯಕ್ಕೆ ಕಂದಾಯವೇ ಬಹಳ ಪ್ರಾಮುಖ್ಯ ವಾದುದಾಗಿತ್ತು. ಆಗೇನಾದರೂ ಹಾಗೆ ಮಾಡು ತ್ತಿದ್ದರೋ ಏನೋ. ಈಗ ರಾಜ್ಯದ ವರಮಾನದ ಭೂಕಂದಾಯದ ಬಾಬುಗಿಂತ ಹೆಚ್ಚಾಗಿ ವರಮಾನ ತರತಕ್ಕ ಬಾಬುಗಳು ಅನೇಕ ಇವೆ. ಆದುದರಿಂದ ಈಗ ಹಾಗೆ ಮಾಡುವುದಕ್ಕೆ ಕಾರಣವೇ ಇಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಪ್ರೊಬೇಷನರಿ ತಹಸೀಲ್ದಾರರನ್ನು ಇನ್ನೂ ಏಕೆ ಕನ್ಫರಂ ಮಾಡಿಲ್ಲ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂಥಾ ನಿದರ್ಶನ ಗಳನ್ನು ನನ್ನ ಗಮನಕ್ಕೆ ತಂದರೆ ಪರಿಶೀಲನೆ ಮಾಡೋಣ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಈ ವರ್ಷ ತಾವು ಕಂದಾಯ ರಿಮಿಷ್ಷ ಕೊಟ್ಟರೆ ಅದು ಮುಂದಿನ ಸಾಲಿಗೆ ಲೆಕ್ಕ ಆಗುತ್ತದೆ. ಈ ವರ್ಷ ನಮ್ಮ ತಾಲ್ಲೂಕಿನಲ್ಲಿ ಇನ್ನೂ ಉಳುಮೆ ಕೂಡ ಆಗಿಲ್ಲ. ದನಗಳಿಗೆ ಮೇವಿಲ್ಲ.

Mr. SPEAKER.—The Government say that they are not aware of it. If you have got specific instances, give them to the Minister. He will see what can be done about them.

ಶ್ರೀ ಎಂ. ವಿ. ಕೃಷ್ಣಪ್ಪ.—ದುರ್ದೈವದಿಂದ ಆ ಜಿಲ್ಲೆಯಲ್ಲೆನ್ನೂ ಮಳೆ ಬಿದ್ದಿಲ್ಲ. ಅನೇಕ ತಾಲ್ಲೂಕು ಗಳಲ್ಲಿ ಬಿತ್ತನೆ ಇಟ್ಟಿಲ್ಲ. ದೇವರ ಅನುಗ್ರಹದಿಂದ ಅಲ್ಲಿ ಈ ವಾರದಲ್ಲಿ ಮಳೆ ಬೀಳಬಹುದೆಂದು ಯೋಚಿಸು ತ್ತೇನೆ.

ಶ್ರೀ ಜೆ. ಎಲ್. ಕಬಾಡಿ (ಬಾರ್ಡೋಲಿ).—ಬಿಜಾಪುರ ಜಿಲ್ಲೆಯಲ್ಲಿ ಜನಗಳಿಗೆ ಸಾಕಷ್ಟು ಕೆಲಸ ಸಿಕ್ಕುತ್ತಿದೆ ಎಂದು ಹೇಳಲಾಯಿತು. ಆದರೆ ದನಗಳಿಗೆ ಮೇಯಲಿಕ್ಕೆ ಬಿಲ್‌ಕುಲ್ ಹುಲ್ಲು ಇಲ್ಲ. ಅದಕ್ಕೇನು ಪ್ರಯತ್ನ ಮಾಡಿದ್ದಾರೆ?

ಶ್ರೀ ಎಂ. ವಿ. ಕೃಷ್ಣಪ್ಪ,—ದನಗಳ ಮೇವನ್ನು ಕೊಳ್ಳಲು ಜನರಿಗೆ ಸಾಲ ಕೊಡಲಾಗುತ್ತಿದೆ. ಪಕ್ಕದ ಅರಣ್ಯಗಳಲ್ಲಿ ಹುಲ್ಲಿದ್ದರೆ ಅಲ್ಲಿ ಅವರ ದನ ಗಳನ್ನು ಮೇಯಿಸಲು ಅವಕಾಶ ಮಾಡಿದೆ. ಸೊಸೈಟಿಗಳ ಮೂಲಕ ಸಾಲದ ರೂಪದಲ್ಲಿ ಹುಲ್ಲನ್ನು ಸರಬರಾಯಿ ಮಾಡಲಾಗುತ್ತಿದೆ. ಆದರೆ ಮುಂದಕ್ಕೆ ಸರ್ಕಾರದವರಿಗೆ ಹುಲ್ಲನ್ನು ಸರಬರಾಯಿ ಮಾಡಲು ಸಾಧ್ಯವಿಲ್ಲ. ಆದುದರಿಂದ ಮುಂದಕ್ಕೆ ರೈತರೇ ತಮ್ಮ ತಮ್ಮ ಜಮೀನಿನಲ್ಲಿ ಹುಲ್ಲನ್ನು ಬೆಳೆದುಕೊಳ್ಳಲು ಪ್ರಯತ್ನ ಮಾಡಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಹಿಂದೆ ರೆವಿನ್ಯೂ ಮಂತ್ರಿಗಳಾಗಿದ್ದ ಶ್ರೀ ಮಂಜಪ್ಪನವರು ಅಭಾವ ಪರಿಸ್ಥಿತಿಯನ್ನು ನೀಗಲು ಒಂದು ಶಾಶ್ವತವಾಗಿ ಫ್ಯಾಮಿನ್ ರಿಲೀಫ್ ಬೋರ್ಡನ್ನು ಸ್ಥಾಪನೆ ಮಾಡುವುಧಾಗಿ ಹೇಳಿದ್ದರು. ಆ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೋರ್ಡು ಮಾಡಿದ ರೇನೂ ಪ್ರಯೋಜನವಾಗುವುದಿಲ್ಲ. ಫ್ಯಾಮಿನ್ ರಿಲೀಫ್ ಫಂಡ್ ಎಂದು ಒಂದು ಖಾಯಂ ನಿಧಿಯನ್ನು ಮಾಡಲು ನದ್ಯದಲ್ಲೇ ಒಂದು ಬಿಲ್ಲನ್ನು ತರಬೇಕೆಂದು ಮಾಡಿದ್ದೇವೆ. ಈ ಬಗ್ಗೆ ಕೇಂದ್ರ ಸರ್ಕಾರದವರೂ ಕೂಡ ಒಂದು ಪ್ಲಾನನ್ನು ಹಾಕಿಕೊಂಡು ಕೆಲಸ ಮಾಡಬೇಕೆಂದು ಮಾಡಿದ್ದಾರೆ. ಆದ್ದರಿಂದ ನಾವು ಅಭಾವ ಪೀಡಿತ ಪ್ರದೇಶಗಳ ಸರ್ವೆ ನಡೆಸು ತ್ತಿದ್ದೇವೆ, ಈಗ.

ಶ್ರೀ ನಂಜೀವನಾಥ ಐಕಳ್ (ಸೂರತ್‌ಕಲ್).—ಸ್ವಾಮಿ, ಪಟೇಲ ಶಾನುಭೋಗರಿಗೆ ಪರಿಹಾರ ಕೊಡುವ ವಿಚಾರ ಹೇಳಲಿಲ್ಲ. ಅದನ್ನು ಹೇಳುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಆದಷ್ಟು ಬೇಗನೆ ಮಾಡುತ್ತೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ರೈತರಿಗೆ ತಕ್ಷಣ ಜಮೀನು ಸಿಕ್ಕುವ ಹಾಗೆ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಹೇಳಿದ್ದೀರಿ; ಅದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವೈ. ಮಂಜಯ್ಯ ಶೆಟ್ಟಿ (ಬೈಂದೂರು).—ಭೂಸುಧಾರಣೆ ಕಾನೂನನ್ನು ಜಾರಿಗೆ ತರುವ ಪೂರ್ವ ದಲ್ಲಿ ರಾಜ್ಯಾಂಗ ತಿದ್ದುಪಡಿಯಾಗಬೇಕಾಗಿದೆ ಎಂದು ಮಂತ್ರಿಗಳು ಹೇಳಿದರೆ ಈ ಕಾನೂನು ಜಾರಿಗೆ ಬಾರದೇ ಇರುವುದರಿಂದ ಇದರ ವಿಚಾರದಲ್ಲಿ ಜನರಲ್ಲ ಅತೃಪ್ತಿಯುಂಟಾಗಿದೆ. ಇದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೇರಳದಲ್ಲಯ ಅಗ್ರೇರಿಯನ್ ಆಕ್ಟ್ ಸುಪ್ರೀಂ ಕೋರ್ಟಿನಲ್ಲಿ ಕ್ವಾಶ್ ಆಗಿರುವುದರಿಂದ ಅದರ ಪರಿಣಾಮ ಮಂಗಳೂರು ಜಿಲ್ಲೆಯ ಕೆಲವು ಭಾಗಗಳಿಗೆ ಅನ್ವಯಿಸುತ್ತದೆ. ಆದರೆ ಈ ಕಾನೂನು ಜಾರಿಗೆ ತರಲು ರಾಜ್ಯಾಂಗ ತಿದ್ದುಪಡಿ ಮಾಡಬೇಕಾಗಿದೆ.

ಶ್ರೀ ಜಿ. ವೆಂಕಟೇಗೌಡ.—ಕೆಲವೊಂದು ಪ್ರದೇಶವನ್ನು ಬಿಟ್ಟು ಬೇರೆ ಕಡೆ ಜಾರಿಗೆ ತರಬಹುದಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಮಾಡಿದರೆ ಅಸ್ಕ್ರಿಮಿನೇಷನ್ ಮಾಡಿದ ಹಾಗಾಗುತ್ತದೆ. ಡೀತ್ ಕೆನವಾ, ಬಳ್ಳಾರಿ, ಕೊಳ್ಳೇಗಾಲ ಬಿಟ್ಟು ಸೌರೆ ಕಡೆ ಜಾರಿ ಮಾಡಿದರೆ discrimination ಮಾಡಿದಾಗಿದೆಯೆಂದು ಹೈಕೋರ್ಟಿನಲ್ಲಿ ರಿಟ್ ಪೆಟಿಷನ್‌ಗಳು ಬರುತ್ತವೆ. ಆದ್ದರಿಂದ ಹಾಗೆ ಮಾಡಲು ಸಾಧ್ಯವಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಪಟೇಲ್ ಶ್ಯಾನು ಭೋಗರಿಗೆ ಎಷ್ಟು ಪರಿಹಾರ ಹಣ ಕೊಡಬೇಕೆಂದು ನಿಗದಿ ಮಾಡಿದ್ದೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಆಕ್ಟ್‌ನಲ್ಲಿದೆ.

ಒಬ್ಬ ಮಾನ್ಯ ಸದಸ್ಯರು.—ಅನೇಕ ಕಡೆ ಜಮೀನು ಕೊಡಿ ಎಂದು ರೈತರು ಮನವಿಮಾಡಿಕೊಂಡಿದ್ದಾರೆ ಬಡ ರೈತರಿಗೆ ಜಮೀನು ದೊರೆಯದೆ ಶ್ರೀಮಂತರಾದವರಿಗೆ ಜಮೀನು ಕೊಡಲಾಗುತ್ತಿದೆ. ಇದನ್ನು ತಪ್ಪಿಸಲು ಪ್ರಯತ್ನಿಸುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಾನೂನು ಪ್ರಕಾರ ಜಮೀನು ಇಲ್ಲದೇ ಇರುವವರಿಗೆ ಜಮೀನು ಕೊಡಬೇಕೆಂದು ಇದೆ. Insufficient holders ಗೆ ಸಹ ಜಮೀನು ಕೊಡಲು ಬರುತ್ತದೆ ಅಂಥವರು ಶ್ರೀಮಂತರಾಗಿರಬಹುದು. ಜಮೀನು ಇಲ್ಲದವರಿಗೆ ಜಮೀನು ಕೊಡುತ್ತೇವೆ. ಜಮೀನು ಇದ್ದವರಿಗೆ ಕೊಡುವುದನ್ನು ತಪ್ಪಿಸುತ್ತೇವೆ.

Mr. SPEAKER.—I will now put the Demands to the vote. The question is:

"That the respective sums not exceeding the amounts shown in the list of Demands circulated to the Members be granted to the Government to defray the charges which will come in course of payment during the financial year ending 31st day of March 1963, in respect of Demands No. 25, 2, 42, 33."

*The motion was adopted.*

[As directed by the Speaker, the Motions for Demands for Grants which were adopted by the House are reproduced below.]

Demand No. 25—Community Development, etc.

37. Community Development Projects, National Extension Service and Local Development Works.

"That a sum not exceeding Rs. 3,03,03,000 be granted to the Government to defray the charges which will come in course of payment during the financial year for the period ending 31st day of March 1963, in respect of 'Community Development Projects, National Extension Service and Local Development Works.'"

Demand No. 2—Land Revenue

9. Land Revenue.

"That a sum not exceeding Rs. 4,01,13,0 0 be granted to the Government to defray the charges which will come in course of payment during the financial year for the period ending 31st day of March 1963, in respect of 'Land Revenue'".

Demand No. 42—Compensation to Zamindars.

92. Payment of Compensation to Landholders etc., on the abolition of Zamindari system.

"That a sum not exceeding Rs. 56,82,000 be granted to the Government to defray the charges which will come in course of payment during the financial year for the period ending 31st day of March 1963, in respect of 'payment of Compensation to landholders, etc. on the abolition of Zamindari System.'"

Demand No. 33—Famine.

64. Famine Relief.

"That a sum not exceeding Rs. 69,09,000 be granted to the Government to defray the charges which will come in course of payment during the financial year for the period ending 31st day of March 1963, in respect of 'Famine Relief'".

Voting Demands for Grants—Demands Nos. 24, 28 and 44.

Sri K. MALLAPPA (Minister for Industries and Commerce).—Sir, On the recommendation of the Governor of Mysore, I beg to move:

"That a sum not exceeding Rs. 22,32,71,800 be granted to the Government to defray the charges which will come in course of payment during the financial year for the period ending 31st day of March 1963, in respect of 'Industries'."

Mr. SPEAKER.—Motion moved;

"That a sum not exceeding Rs. 22,32,71,800 be granted to the Government to defray the charges which will come in course of payment during the financial year for the period ending 31st day of March 1963, in respect of 'Industries.'"

(MR. SPEAKER)

Not only Demand No. 24, but Demands Nos. 28 and 44 are also before the House.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಅಧ್ಯಕ್ಷರೇ, ಈಗ ತಾನೆ ಕೈಗಾರಿಕ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಯಲ್ಲಿ ನುಮಾರು 22 ಕೋಟಿ ಚಿಲ್ಲರೆ ಕೈಗಾರಿಕಾ ಇಲಾಖೆಗಾಗಿ ಕೇಳಿದ್ದಾರೆ. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಕೈಗಾರಿಕಾ ನೀತಿಗೂ ಆರ್ಥಿಕ ನೀತಿಗೂ ನಿಕಟ ಸಂಬಂಧವಿದೆ. ಇವತ್ತಿನ ದಿವಸ ಕೈಗಾರಿಕೆಯ ವಿಚಾರದಲ್ಲಿ ರೀತಿ ನೀತಿಯ ಅಭಾವದಿಂದ ಆರ್ಥಿಕ ನೀತಿಯು ದಿವಾಳಿ ತೋರಿ ಬರುತ್ತದೆ. ಹಿಂದಿನ ಧಿವಾನರ ಕಾಲದಲ್ಲಿ ನಮ್ಮ ಮೈಸೂರು ಸಂಸ್ಥಾನವು ಕೈಗಾರಿಕೆಗಳಿಗೆ ಸುಪ್ರಸಿದ್ಧವಾದ ದೇಶವಾಗಿತ್ತು. ವಿದ್ಯುತ್ ಶಕ್ತಿ ಉತ್ಪಾದನೆ ಕೈಗಾರಿಕೆಗಳಿಗಾಗಿ ಭಾರತ ದೇಶದಲ್ಲಿ ಪ್ರಸಿದ್ಧವಾದ ಮೈಸೂರಿಗೆ ಹೊರಗಿನಿಂದ ಜನ ಬಂದು ಯಾವ ರೀತಿ ಕೆಲಸ ನಡೆಯುತ್ತಿದೆ, ಹೇಗೆ ವಿದ್ಯುತ್ ಶಕ್ತಿ ಉತ್ಪಾದನೆ ಯಾಗುತ್ತಿದೆ ಎನ್ನುವುದನ್ನು ನೋಡಿಕೊಂಡು ಹೋಗುವ ಒಂದು ಕಾಲವಿದ್ದಿತು. ಅಂಥ ನಮ್ಮ ದೇಶದಲ್ಲಿ ಇವತ್ತಿನ ದಿವಸ ಕೈಗಾರಿಕೆಗಳ ವಿಚಾರದಲ್ಲಿ ಹಿಂದೆ ಹೋಗಿದ್ದೇವೆ. ವಿದ್ಯುತ್ ಶಕ್ತಿ ಉತ್ಪಾದನೆಯಲ್ಲಿ ಎಂಟನೆಯ ಅಥವಾ ಹತ್ತನೇ ರ್ಯಾಂಕಿಗೆ ಬಂದಿದ್ದೇವೆ. ಇಂಥ ಕಷ್ಟದ ಪರಿಸ್ಥಿತಿ ನಮ್ಮ ಸರ್ಕಾರದ 15 ವರ್ಷಗಳ ಆಡಳಿತದಲ್ಲಿ ಉಂಟಾಗಿದೆ. ಶ್ರೀಮಾನ್ ಕೃಷ್ಣಪ್ಪನವರು ಹೇಳಿದರು. ಅಧಿಕಾರದ ಆಡಳಿತದ ಅನುಭವ ಪಡೆದಿದ್ದೇವೆ, ದೊಡ್ಡವರಾಗಿದ್ದೇವೆ ಎಂದು ಆದರೆ ನಮ್ಮ ಸರಕಾರದ ಕೈಗಾರಿಕಾ ನೀತಿ ಲಂಗುಲಗಾಮಿಲ್ಲದ ಕುದುರೆಯ ಹಾಗೆ ಆಗಿದೆ. ಆರ್ಥಿಕ ನೀತಿಗೂ ಲಂಗುಲಗಾಮಿಲ್ಲದಾಗಿದೆ. ಇದೇ ಮಾತನ್ನು ಶ್ರೀಮಾನ್ ಸಂತಾನಂ ಅವರು ಸಹ ಹೀಗೆ ಹೇಳಿದ್ದಾರೆ. "He appears to be planning for a motor car which has many accelerators but no speedometer or brakes". ಬ್ರೇಕ್ ಇಲ್ಲವೆಂದರೆ ಲಂಗು ಇಲ್ಲ ಲಗಾಮು ಇಲ್ಲ ಅಂದ ಹಾಗಿದೆ. ದುಡ್ಡನ್ನು ಖರ್ಚು ಮಾಡುವ ರೀತಿನೀತಿಯನ್ನು ಅನುಸರಿಸಿಕೊಂಡು ಬಂದಿದ್ದೀರಿ. ಯಾವ ಕಾಲದಲ್ಲಿ ಯಾವ ಉದ್ಯಮಕ್ಕೆ ಯಾವ ರೀತಿ ಎಷ್ಟು ಹಣ ಖರ್ಚು ಮಾಡಬೇಕು ಎನ್ನುವುದಕ್ಕೆ ಬ್ರೇಕ್ ಇಲ್ಲ, ಬ್ರೇಕ್ ಹಾಕುವ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿಲ್ಲ. ಸಮಾಜವಾದ ಪದ್ಧತಿಯ ಮೇಲೆ ಆಡಳಿತ ನಡೆಸುತ್ತಿದ್ದೇವೆಂದು ಸರ್ಕಾರದವರು ಹೇಳುತ್ತಾರೆ. ಸಮಾಜವಾದವಿಲ್ಲದೆ ಬಂಡವಾಳಶಾಹಿ ನಡೆಯುತ್ತಿದೆ. ವೇದಿಕೆಯ ಮೇಲೆ ನಿಂತು ಸಮಾಜವಾದ ಆಡಳಿತ ಪದ್ಧತಿಯ ಮಾತುಗಳನ್ನು ಆಡುತ್ತೀರಿ. ಇವತ್ತಿನ ದಿವಸ ನಿಮ್ಮ ಕೈಗಾರಿಕಾ ನೀತಿ ವಿಫಲವಾಗಿದೆ. ದೇಶದಲ್ಲಿ ಇವತ್ತಿನ ದಿವಸ ಕೆಲವು ಜನರು ಬಹಳ ಶ್ರೀಮಂತರಾಗುತ್ತಿದ್ದಾರೆ. ಅವರು ಅತ್ಯಲ್ಪ ಸಂಖ್ಯೆಯಲ್ಲಿದ್ದ ಜನರು. ಆದರೆ ಬಹು ಸಂಖ್ಯೆಯಲ್ಲಿದ್ದವರು ಬಡವರು ಹೆಚ್ಚಾಗುತ್ತಿದ್ದಾರೆ. ಈ ನೀತಿ ನೀವು ಅಧಿಕಾರಕ್ಕೆ ಬಂದ ಮೇಲೆ ನಡೆಯುತ್ತಿದೆ. private sector, public sector, mixed economy ಎಂದು ಮೂರು ಪ್ರಕಾರದ ವಿಂಗಡಣೆ ಮಾಡಿದ್ದೇವೆಂದು ಹೇಳುತ್ತಿದ್ದೀರಿ. ನಮಾಜವಾದ ಅಂದರೆ public sector ಎಂದು ಹೇಳಲಾಗುತ್ತಿದೆ.

ಇವೊತ್ತಿನ ದಿವಸ ಪಬ್ಲಿಕ್ ಸೆಕ್ಟಾರ್ ಯಾವ ರೀತಿ ಮತ್ತು ಯಾವ ನಮೂನೆಯಿಂದ ಈ ದೇಶದಲ್ಲಿ ನಡೆಯುತ್ತಿದೆ ಎನ್ನುವುದರ ಮೇಲೆ, ನಮಾಜವಾದ ನಿಂತಿದೆ. ಈ ತತ್ವದ ಅಧಾರಸ್ತಂಭವಾಗಿರುವ ಪಬ್ಲಿಕ್ ಸೆಕ್ಟಾರ್ ಏನಿದೆ ಅದು ಎಷ್ಟು ಯಶಸ್ವಿಯಾಗಿ ಈ ದೇಶದಲ್ಲಿ ಕೈಗಾರಿಕೆಗಳನ್ನು ನಡೆಸಿಕೊಂಡು ಬಂದಿದೆಯೋ ಆ ಆಧಾರದ ಮೇಲೆ ಮುಂದಿನ ಸರಕಾರ ನಮಾಜವಾದವನ್ನು ಕಾರ್ಯಗತ ಮಾಡುತ್ತದೆಂದು ಹೇಳುತ್ತೇನೆ. ಸರ್ಕಾರ ಏನೇನು ಕೈಗಾರಿಕೆಗಳನ್ನು ನಡೆಸುತ್ತದೆಯೋ ಅದರ ಯಶಸ್ಸಿನ ಮೇಲೆ ನಮಾಜವಾದದ ಸ್ಥಾಪನೆ ನಿಂತಿದೆ ಎಂದು ನಾನು ಒತ್ತಿ ಹೇಳಬೇಕಾಗಿದೆ.

Mr. SPEAKER.—I am suggesting to the House that the discussion on these Demands will go on for the rest of the day and till three of the clock tomorrow. I am also suggesting that there will be no question-hour tomorrow as there are not enough questions for being taken up for all the days.

Sri G. DUGGAPPA (Holalkere)—We have already received the question set for tomorrow, Sir.

Mr. SPEAKER.—It will not be included in the agenda for tomorrow. It will stand for the next succeeding day.

The House will stand adjourned and will meet half-an-hour later.

---

*The House adjourned for recess at Five Minutes past Three of the Clock and reassembled at Thirty Minutes past Three of the Clock.*

---

[MR. DEPUTY SPEAKER in the Chair]

Mr. DEPUTY SPEAKER.—The Education Minister will now make a statement.

(*Sri S. R. Kanthi rose.*)

†ಶ್ರೀ ಜಿ. ಪೆಂಕಟೇಗೌಡ.—ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಮುಂಚೆ ಒಂದು ಮಾತನ್ನು ಹೇಳಬೇಕಾಗಿದೆ. ಮಂತ್ರಿಗಳು ಹೇಳಿಕೆ ಕೊಡುವ ವಿಚಾರವನ್ನು ಕುರಿತು ನಾವು ಒಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೇವೆ. ಈಗ ಸ್ಟೇಟ್‌ಮೆಂಟ್ ಮಾಡಲು ಅವಕಾಶ ಕೊಟ್ಟರೆ ನಿಲುವಳಿ ಸೂಚನೆಗೆ ಮಾನ್ಯತೆ ದೊರಕದೆ ಎಂದು ನಾನು ಭಾವಿಸಲೇ? ಸ್ಟೇಟ್‌ಮೆಂಟ್ ಮಾಡುವುದಕ್ಕೆ ಮುನ್ನ ಏನು ಪರಿಸ್ಥಿತಿ ಇತ್ತು? ಅದರ ಬಗ್ಗೆ motion move ಮಾಡಲು ಮತ್ತು ಕೆಲವು ವಿಷಯಗಳನ್ನು ಹೇಳಲು ಅವಕಾಶ ಕೊಡಬೇಕು. ಆನಂತರ ಮಾನ್ಯಮಂತ್ರಿಗಳು ಉತ್ತರ ಹೇಳಿದರೆ, ಸಭೆ ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತದೆಯೋ ತೆಗೆದುಕೊಳ್ಳಲಿ.

ಉಪಾಧ್ಯಕ್ಷರು. ನೀವು ಏನು motion ಕೊಟ್ಟಿದ್ದೀರೋ ಅದು ಇನ್ನೂ ಪರಿಶೀಲನೆಯಲ್ಲಿದೆ. ಅದನ್ನು allow ಮಾಡಿಲ್ಲ ಅಥವಾ disallow ಮಾಡಿಲ್ಲ. That does not arise now. The Minister can make a statement at any time.

ಶ್ರೀ ಜಿ. ವೆಂಕಟೇ ಗೌಡ.—ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆನ್ನುವ ಆಧಾರದ ಮೇಲೆ ನಿಲುವಳಿ ಸೂಚನೆಯನ್ನು ತಳ್ಳಿಹಾಕಬಹುದು. ಆಗ ಅದರ ಯೋಗ್ಯತೆಯ ಮೇಲೆ ಅದನ್ನು ಪರಿಶೀಲಿಸಿದ ಹಾಗೆ ಆಗುವುದಿಲ್ಲ. ಈ ವಿಚಾರ ಇತ್ಯರ್ಥವಾಗುವವರೆಗೂ ಅದೇ ವಿಚಾರದ ಮೇಲೆ statement ಮಾಡುವುದಕ್ಕೆ ಅವಕಾಶ ಕೊಟ್ಟರೆ ನಾವು ಕಳಿಸಿರ ತಕ್ಕ ನಿಲುವಳಿ ಸೂಚನೆಯ ವಿಷಯ ಏನಾಗುತ್ತದೆಂಬುದನ್ನು ತಾವು ಯೋಚನೆ ಮಾಡಬೇಕು.

Mr. DEPUTY SPEAKER.—That will be considered in due course.

Sri K. LAKKAPPA.—I have also sent a call attention notice.

Mr. DEPUTY SPEAKER.—That will be considered and the House will be intimated.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಶ್ರೀಮಾನ್ ವೆಂಕಟೇ ಗೌಡರು ಕೇಳಿದ ವಿಚಾರಕ್ಕೆ ಏನು ಹೇಳಿದಿರಿ? ನಿಲುವಳಿ ಸೂಚನೆಯನ್ನು ಕೊಟ್ಟಿರುವುದನ್ನು allow ಮಾಡುತ್ತೇವೆ ಅಥವಾ ಇಲ್ಲ ಎಂದು ಹೇಳಬೇಕು. ಮಾನ್ಯ ಮಂತ್ರಿಗಳು ಹೇಳಿಕೆ ಮಾಡಿದ ಮೇಲೆ ಏನಾಗುತ್ತದೆ? ನೀವು disallow ಮಾಡಿದ್ದೇವೆಂದು ಹೇಳಿ ಅಥವಾ allow ಮಾಡಿದ್ದೇವೆಂದು ಹೇಳಿ. ನಾವು ಒಪ್ಪಿಕೊಳ್ಳುತ್ತೇವೆ. ಈಗ ತೀರ್ಮಾನ ಮಾಡದೇ ಹಾಗೆಯೇ ಇಟ್ಟು, ಮಂತ್ರಿಗಳ ಹೇಳಿಕೆ ಆದನಂತರ "I regret my inability to allow it in view of the statement made by the Minister" ಎಂದು ನಿಮ್ಮ ಆಫೀಸಿನಿಂದ ಒಂದು ಪತ್ರ ಬರುತ್ತದೆ. ಅದಕ್ಕೋಸ್ಕರ ಈಗಲೇ ಈ ವಿಚಾರವನ್ನು ಕೂಲಂಕಷವಾಗಿ ವಿಮರ್ಶೆ ಮಾಡಿ. ಒಂದು procedure ಅನುಸರಿಸುವಾಗ ಚೆನ್ನಾಗಿ ಯೋಚನೆ ಮಾಡಬೆಕು. ಇದು ಪ್ರೊಸೀಡಿಂಗ್ಸ್‌ನಲ್ಲಿರುತ್ತದೆ. ಮುಂದೆ ಇದು precedent ಆಗುತ್ತದೆ. ಅದಕ್ಕಾಗಿ ಈ ವಿಚಾರವನ್ನು ಮತ್ತೊಮ್ಮೆ ಪರಿಶೀಲಿಸಬೇಕೆಂದು ಹೇಳುತ್ತೇನೆ.

Mr. DEPUTY SPEAKER.—There is no object served in discussing it now. As regards the adjournment motion, I have already said that it will receive due consideration. The position now is that it has not either been disallowed or allowed. But that does not prevent the Minister from making a statement as per the rules.

Sri G. VENKATAI GOWDA.—The very object of submitting an adjournment motion would be defeated if the Minister is permitted to make a statement in advance on the same subject.

Mr. DEPUTY SPEAKER.—I have heard the discussion carefully. Nothing more need be said. The Hon'ble Minister for Education will proceed with the statement.

Sri G. VENKATAI GOWDA.—I rise to a point of order. When an issue on a particular subject-matter is pending consideration of the Chair, is it permissible for any Minister to make a statement in respect of the very same subject?

Mr. DEPUTY SPEAKER.—When the Chair is yet to take a decision, the Minister is entitled to make a statement and the Speaker will in due course give his consideration to the notices given by the Members. There is nothing wrong in the Minister making a statement. This is my ruling and that is an end of the matter.

## Statement

Sri S. R. KANTHI (Minister for Education).—Mr. Speaker, Sir, the total expenditure on the collegiate education is increasing...

Sri S. SIVAPPA.—On a point of order, Sir. Is the Minister in order if he replies to a subject matter which has been before the House in the form of an adjournment motion or a short-notice question or a Call Attention notice? There is an adjournment notice which is not yet disposed of and which is before the House. Is the Minister in order if he makes a statement on the same subject matter?

Mr. DEPUTY SPEAKER.—The Leader of the Opposition presumes that the question of adjournment motion is before the House; It is not before the House. Notice of an adjournment motion is given to the Speaker or to the office and it may be allowed or may not be allowed. It may not come before the House at all. Simply because a motion is handed over to the office, it does not mean than the matter is before the House. It is under the consideration of the Speaker. The Speaker may allow the Minister to make a statement and the adjournment motion will be considered on its merit. That is my ruling.

†Sri C. J. MUCKANNAPPA.—I want to draw the attention of the Chair to rule 50: